ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ

ಕೆ.ಎನ್.ಟಿ.ಬಿ. ಸ್ಯಾನಿಟೋರಿಯಂ ಆಸ್ಪತ್ರೆ ಆವರಣ,ಬಂಗಾರಪೇಟೆ ರಸ್ತೆ, ಕೋಲಾರ – 563102

ಸಂಖ್ಯೆ:ಡಿಹೆಚ್ಎಸ್/ಎನ್‌ಹೆಚ್ಎಂ/ಕೋ/ಗು.ನೇ/01/2025-26 ದಿನಾಂಕ:08-12-2025

## ಪ್ರಕಟಣೆ

ಎನ್‌ಹೆಚ್ಎಂ/ಎನ್‌ಯುಹೆಚ್ಎಂ ಹಾಗೂ PM-ABHIM ಯೋಜನೆಯಡಿಯಲ್ಲಿ ಖಾಲಿಯಿರುವ ಈ ಕೆಳಕಂಡ ವಿವಿಧ ವೃಂದದ ಹುದ್ದೆಗಳನ್ನು ವಿದ್ಯಾರ್ಹತೆ ಹಾಗೂ ಷರತ್ತುಗಳನ್ನೊಳಗೊಂಡಂತೆ 2025-26 ನೇ ಸಾಲಿಗೆ ಗುತ್ತಿಗೆ ಆಧಾರದ ಮೇಲೆ ನೇರ ಸಂದರ್ಶನ ಮೂಲಕ ನೇಮಕ ಮಾಡಿಕೊಳ್ಳಲಾಗುವುದು.

| ಕ್ರ ಸಂ | ಹುದ್ದೆಗಳ ವಿವರ | ವಿದ್ಯಾರ್ಹತೆ | ಮಾಸಿಕ ವೇತನ | ಒಟ್ಟು ಹುದ್ದೆಗಳು | ಅಭ್ಯರ್ಥಿ ವಯೋಮಿತಿ | ಕಾರ್ಯಕ್ರಮ |
|---|---|---|---|---|---|---|
| 1 | ಅರವಳಿಕೆ ತಜ್ಞ ವೈದ್ಯರು | ಎಂಬಿಬಿಎಸ್ ಮತ್ತು ಅರವಳಿಕೆ ತಜ್ಞತೆಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಕರ್ನಾಟಕ ಮೆಡಿಕಲ್ ಕೌನ್ಸಿಲಿಂಗ್‌ನಲ್ಲಿ ನೋಂದಣಿಯಾಗಿರಬೇಕು. | 1,10,000/- | 02 | 60 ವರ್ಷ ಒಳಗಿರತಕ್ಕದು | MH/ RCH |
| 2 | ಸ್ತ್ರೀರೋಗ ತಜ್ಞರು | ಎಂಬಿಬಿಎಸ್ ಮತ್ತು ಸ್ತ್ರೀರೋಗ ತಜ್ಞತೆಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಕರ್ನಾಟಕ ಮೆಡಿಕಲ್ ಕೌನ್ಸಿಲಿಂಗ್‌ನಲ್ಲಿ ನೋಂದಣಿಯಾಗಿರಬೇಕು. | 1,10,000/- | 02 | 60 ವರ್ಷ ಒಳಗಿರತಕ್ಕದು | MH/ RCH |
| 3 | ಮಕ್ಕಳ ತಜ್ಞರು | ಎಂಬಿಬಿಎಸ್ ಮತ್ತು ಮಕ್ಕಳ ತಜ್ಞತೆಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಕರ್ನಾಟಕ ಮೆಡಿಕಲ್ ಕೌನ್ಸಿಲಿಂಗ್‌ನಲ್ಲಿ ನೋಂದಣಿಯಾಗಿರಬೇಕು. | 1,10,000/- | 01 | 60 ವರ್ಷ ಒಳಗಿರತಕ್ಕದು | MH |
| 4 | ರೆಡಿಯೋಲಾಜಿಸ್ಟ್ ತಜ್ಞ ವೈದ್ಯರು | ಎಂಬಿಬಿಎಸ್ ಮತ್ತು ರೆಡಿಯೋಲಾಜಿಸ್ಟ್ ತಜ್ಞತೆಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಕರ್ನಾಟಕ ಮೆಡಿಕಲ್ ಕೌನ್ಸಿಲಿಂಗ್‌ನಲ್ಲಿ ನೋಂದಣಿಯಾಗಿರಬೇಕು. | 1,10,000/- | 01 | 60 ವರ್ಷ ಒಳಗಿರತಕ್ಕದು | RCH |
| 5 | ಫಿಜಿಷಿಯನ್ | ಎಂಬಿಬಿಎಸ್ ಮತ್ತು ಫಿಜಿಷಿಯನ್ ತಜ್ಞತೆಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಕರ್ನಾಟಕ ಮೆಡಿಕಲ್ ಕೌನ್ಸಿಲಿಂಗ್‌ನಲ್ಲಿ ನೋಂದಣಿಯಾಗಿರಬೇಕು. | 1,10,000/- | 01 | 60 ವರ್ಷ ಒಳಗಿರತಕ್ಕದು | RCH |
| 6 | ವೈದ್ಯಾಧಿಕಾರಿಗಳು | ಎಂಬಿಬಿಎಸ್ ಉತ್ತೀರ್ಣರಾಗಿ ಕಡ್ಡಾಯವಾಗಿ Intership ಪೂರೈಸಿರಬೇಕು ಹಾಗೂ ಕೆ.ಎಮ್.ಸಿ ನೋಂದಣಿ ಹೊಂದಿರಬೇಕು | 50000/- | 5 | 60 ವರ್ಷ ಒಳಗಿರತಕ್ಕದು | NRC/ SNCU/ ICU/NUHM |
| 7 | ಅಡಿಯೋಲಾಜಿಸ್ಟ್ & ಸ್ಪೀಚ್ ತೆರಪಿಸ್ಟ್ (Audiologist & Speech therapist) | ಬ್ಯಾಚುಲರ್ ಡಿಗ್ರಿ ಸ್ಪೀಚ್ ಲಾಂಗ್‌ವೇಜ್ ಪ್ಯಾತಲಾಜಿ ಬಿ.ಎಸ್.ಸಿ (ಸ್ಪೀಚ್ & ಇಯರಿಂಗ್) ಆರ್.ಸಿ.ಐ ರಿಕಾಗ್ನೈಜ್‌ಡು ಇನ್‌ಸ್ಟ್ರ್ಯೂಟ್. ಹಾಗೂ ಕಂಪ್ಯೂಟರ್ ಸಾಕ್ಷರತೆಯನ್ನು ಹೊಂದಿರಬೇಕು. | 25000/- | 01 | 40 ವರ್ಷ ಒಳಗಿರತಕ್ಕದು | DEIC |

| | | | | | | |
|---|---|---|---|---|---|---|
| 8 | ಕಿರಿಯ ಆರೋಗ್ಯ ನಿರೀಕ್ಷಣಾ ಧಿಕಾರಿಗಳು | • ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 3 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೊಮಾ ಹೊಂದಿರಬೇಕು.<br>ಅಥವಾ<br>• ಪಿ.ಯು.ಸಿ (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 2 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೊಮೊ ಹೊಂದಿರಬೇಕು. ಹಾಗೂ ಕಂಪ್ಯೂಟರ್ ಸಾಕ್ಷರತೆಯನ್ನು ಹೊಂದಿರಬೇಕು. | 11500/- | 02 | 40 ವರ್ಷ ಒಳಗಿರತಕ್ಕದು | NUHM |
| 9 | ಕಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು | ಕಿ.ಮ.ಆ ಸಹಾಯಕಿಯ ತರಬೇತಿಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು ಮತ್ತು ಕೆಎನ್‌ಸಿ ನೋಂದಣಿ ಹೊಂದಿರಬೇಕು. ಹಾಗೂ ಕಂಪ್ಯೂಟರ್ ಸಾಕ್ಷರತೆಯನ್ನು ಕಡ್ಡಾಯವಾಗಿ ಹೊಂದಿರಬೇಕು. | 14044/- | 03 | 45 ವರ್ಷ ಒಳಗಿರತಕ್ಕದು | PM-ABHIM/MH |
| 10 | ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು | ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಎಎನ್‌ಎಂ ತರಬೇತಿಯೊಂದಿಗೆ ಎಲ್.ಹೆಚ್.ವಿ ತರಬೇತಿಯನ್ನು ಹೊಂದಿರಬೇಕು. | 12600/- | 04 | 60 ವರ್ಷ ಒಳಗಿರತಕ್ಕದು | NUHM |
| 11 | ಫ್ಲೋರೋಸಿಸ್ ಸಲಹೆಗಾರರು | **ವೈದ್ಯಕೀಯ ವ್ಯಕ್ತಿಗೆ:**ಸಮುದಾಯ ಔಷದ/ಸಾರ್ವಜನಿಕ ಆರೋಗ್ಯ/ಬಯೋಕೆಮಿಸ್ಟ್ರಿ/ಮೈಕ್ರೋಬಯಾಲಜಿ / ರೋಗಶಾಸ್ತ್ರ/ಸಮುದಾಯ ಸಂಪನ್ಮೂಲ ನಿರ್ವಹಣೆ/ಪರಿಸರ ಆರೋಗ್ಯ ಅಥವಾ ತತ್ಸ ಮಾನದಲ್ಲಿ ಸ್ನಾತಕೋತ್ತರ ಪದವಿ (ಎಂ.ಡಿ)<br>ಅಥವಾ<br>**ವೈದ್ಯಕೀಯೇತರ ವ್ಯಕ್ತಿಗಳಿಗೆ:** ಬಯೋಕೆಮಿಸ್ಟ್ರಿ / ನ್ಯೂಟ್ರಿಷನ್/ಮೈಕ್ರೋಬಯಾಲಜಿ/ಆಣ್ವಿಕ ಜೀವಶಾಸ್ತ್ರ/ಜೀವ ವಿಜ್ಞಾನ/ಸಾರ್ವಜನಿಕ ಆರೋಗ್ಯ/ ಸಮುದಾಯ ಸಂಪನ್ಮೂಲದಲ್ಲಿ ಡಾಕ್ಟರೇಟ್ ಪದವಿ (ಪಿ.ಹೆಚ್.ಡಿ) ಅಥವಾ ತತ್ಸಮಾನ<br>**ಅಪೇಕ್ಷಣೀಯ ವಿದ್ಯಾರ್ಹತೆ:**ಸ್ನಾತಕೋತ್ತರ ವೈದ್ಯಕೀಯ ಅರ್ಹತೆ/ಸಂಶೋಧನೆ/ಬೋಧನೆ/ಪ್ರಯೋಗಾಲಯ ಸೇವೆಗಳು/ ಪ್ರೋಗಾಂ ಅನುಷ್ಠಾನ ಇತ್ಯಾದಿಗಳಲ್ಲಿ ವೈದ್ಯಕೀಯೇತರರಿಗೆ ಡಾಕ್ಟರೇಟ್ ಅರ್ಹತೆಯ ನಂತರ ಕನಿಷ್ಠ 3 ವರ್ಷಗಳ ಅನುಭವವನ್ನು ಹೊಂದಿರಬೇಕು.<br>**ಸೂಚನೆ:**ಎಂ.ಡಿ ಅರ್ಹತೆ ಹೊಂದಿರುವ ವೈದ್ಯಕೀಯ ವ್ಯಕ್ತಿ ಅಥವಾ ಪಿ.ಹೆಚ್.ಡಿ ಅರ್ಹತೆ ಹೊಂದಿರುವ ವೈದ್ಯಕೀಯೇತರ ವ್ಯಕ್ತಿ ಲಭ್ಯವಿಲ್ಲದಿದ್ದಲ್ಲಿ, ವೈದ್ಯಕೀಯ ವ್ಯಕ್ತಿಗೆ MBBS/ BDS ಅಥವಾ ವೈದ್ಯಕೀಯೇತರ ವ್ಯಕ್ತಿಗೆ MSC ಆಗಿ ಅಗತ್ಯ ಅರ್ಹತೆಯನ್ನು ಸಡಿಲಗೊಳಿಸಹುದು.ವಿಶ್ರಾಂತಿ ಅರ್ಹತೆಗಳನ್ನು ಪರಿಗಣಿಸಲಾಗುತ್ತಿರುವ ಸಂದರ್ಭಗಳಲ್ಲಿ ಅಪೇಕ್ಷಣೀಯ ಅನುಭವವು ಸಂಶೋಧನೆ/ಬೋಧನೆ/ ಪ್ರಯೋಗಾಲಯ ಸೇವೆಗಳು /ಕಾರ್ಯಕ್ರಮ ಅನುಷ್ಠಾನ ಇತ್ಯಾದಿಗಳಲ್ಲಿ 6 ವರ್ಷಗಳಾಗಿರುತ್ತದೆ. | 47250/- | 01 | 40 ವರ್ಷ ಒಳಗಿರತಕ್ಕದು | NPPCF |
| 12 | ನೇತ್ರ ಸಹಾಯಕರು | ಎರಡು ವರ್ಷದ Diploma in Optometry ಅಥವಾ ನೇತ್ರ ಸಹಾಯಕರು (Ophthalmic Assistant) ಆಗಿ ಮಾನ್ಯತೆ ಪಡೆದ ಸರ್ಕಾರಿ ಆಸ್ಪತ್ರೆಗಳಲ್ಲಿ NPCB ನಿಯಮಾನುಸಾರ ತರಬೇತಿ ಪಡೆದಿರಬೇಕು. Computer (MS Word, Ms Excel, Power Point) ಮತ್ತು Internet ಇತ್ಯಾದಿಗಳ ಬಳಕೆಗೆ ಬೇಕಾಗುವ Computer Basic Course ನಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. | 13800/- | 08 | 40 ವರ್ಷ ಒಳಗಿರತಕ್ಕದು | RBSK |

ವಿಶೇಷ ಸೂಚನೆಗಳು:-

1) ಮೇಲ್ಕಂಡ ಹುದ್ದೆಗಳಿಗೆ (ತಜ್ಞ ವೈದ್ಯರು/ಎಂ.ಬಿ.ಬಿ.ಎಸ್ ವೈದ್ಯರು / ವೈದ್ಯರು ಹೊರತುಪಡಿಸಿ) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿದ್ದು, ಕಿಯೋನಿಕ್ಸ್ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

2) ದಿನಾಂಕ:16-12-2025 ರಂದು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ:04:00 ಗಂಟೆಯವರೆಗೆ ಮೂಲ ದಾಖಲೆಗಳ ಪರಿಶೀಲನೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಹಾಜರಾಗತಕ್ಕದು, ನಂತರ ಬಂದಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.

3) ಮೂಲ ದಾಖಲಾತಿಗಳ ಪರಿಶೀಲನೆಗೆ ಕಡ್ಡಾಯವಾಗಿ ಒಂದು ಸೆಟ್ ಜೆರಾಕ್ಸ್ (ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಆಧಾರ್ ಜೆರಾಕ್ಸ್ ಪ್ರತಿ, ಕಂಪ್ಯೂಟರ್ ಸಾಕ್ಷರತಾ ಪ್ರಮಾಣ ಪತ್ರ, ಜನ್ಮ ದಿನಾಂಕ ದೃಡೀಕರಣ ಪ್ರತಿ (ಎಸ್.ಎಸ್.ಎಲ್.ಸಿ ಅಂಕ ಪಟ್ಟಿ) ಮತ್ತು ವಿಳಾಸ ದೃಡೀಕರ ಪತ್ರ ಒಳಗೊಂಡಂತೆ) ಪ್ರತಿಗಳೊಂದಿಗೆ ನಿಗಧಿತ ಸಮಯದೊಳಗಾಗಿ ಹಾಜರಾಗುವುದು.

4) ಮೂಲ ದಾಖಲೆಗಳ ಪರಿಶೀಲನೆಗೆ ಮೂಲ ದಾಖಲೆಗಳು ಹಾಜರು ಪಡಿಸದೇ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.

5) ಈ ನೇಮಕಾತಿಯು ಎನ್‌ಹೆಚ್‌ಎಂ/ಎನ್‌ಯುಹೆಚ್‌ಎಂ ರಾಜ್ಯ ವಲಯದ ನಿಯಮಾವಳಿ ಷರತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

6) ಈ ಮೇಲ್ಕಂಡ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಚಾಲ್ತಿ ಇರುವ ಸರ್ಕಾರದ ಕಾಲಕಾಲಕ್ಕೆ ಬದಲಾಗುವ ನಿಯಮಗಳಂತೆ ನೇಮಕಾತಿ ಮಾಡಲಾಗುವುದು.

7) ಮೆರಿಟ್ ಕಮ್ ರೋಸ್ಟರ್ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

8) ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆ ಇಲ್ಲದಿರುವುದು ಹಾಗೂ ಫಲಿತಾಂಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.

9) ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರವನ್ನು ನೇಮಕಾತಿ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘವು ಮಾತ್ರ ಹೊಂದಿರುತ್ತದೆ.

10) ಈ ಗುತ್ತಿಗೆ ಆಧಾರದ ಸೇವೆಯ ಆಯ್ಕೆಯನ್ನು ನಿಧಿಷ್ಟ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ ಅಭ್ಯರ್ಥಿಯು ಬೇಡಿಕೆಯ ಮೇಲೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲಿ / ಪರಸ್ಪರ ವರ್ಗಾವಣೆಯಾಗಲಿ ಅಥವಾ ನಿಯೋಜನೆಗಾಗಲಿ ಅವಕಾಶವಿರುವುದಿಲ್ಲ.

11) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಕೆ.ಎಂ.ಸಿ ಮತ್ತು ಕೆ.ಎನ್.ಸಿ ಪ್ರಮಾಣ ಪತ್ರವನ್ನು ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

12) ಮೂಲ ದಾಖಲಾತಿಗಳ ಪರಿಶೀಲನೆ ನಂತರ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಂಬಂಧಿಸಿದ ವಿವರಗಳನ್ನು https://Kolar.nic.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

13) ಆ ದಿನದ ಆಯ್ಕೆ ಪ್ರಕ್ರಿಯೆಯಲ್ಲಿ ಹುದ್ದೆಗಳ ಸಂಖ್ಯೆ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಈ ಆಯ್ಕೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
ಕೋಲಾರ ಜಿಲ್ಲೆ,ಕೋಲಾರ